

## ನಕ್ಕು ಬಿಡಿ

ಮಗ: ಡ್ಯಾಡಿ, ನಾನು ಮದುವೆ ಮಾಡಿಕೊಳ್ಳಬೇಕೆಂದಿದ್ದೇನೆ.
ತಂದೆ: ಮೊದಲು ಸಾರಿ ಹೇಳು.
ಮಗ: ನಾನ್ ಹೇಳಿದ್ದರಲ್ಲಿ ಏನು ತಪ್ಪಿದೆ ಅಂತ ಹೇಳಿ ಆಮೇಲೆ ಸಾರಿ ಹೇಳುವೆ.
ತಂದೆ: ನೀನು ಮೊದಲು ಸಾರಿ ಹೇಳು.
ಮಗ: ಯಾಕೆ ಅಂತ...?
ತಂದೆ: ನೀನು ಮೊದಲು ಸಾರಿ ಹೇಳು.
ಮಗ: ಡ್ಯಾಡಿ, ಪ್ಲೀಸ್, ಹೀಗೇಕೆ ಹೇಳ್ತಿದ್ದೀರ?
ತಂದೆ: ನೀನು ಮೊದಲು ಸಾರಿ ಹೇಳು.
ಮಗ: ಯೆಸ್ ಡ್ಯಾಡಿ, ಐ ಆ್ಯಮ್ ಸಾರಿ!
ತಂದೆ: ನೀನೀಗ ಖಂಡಿತ ಮದುವೆ ಮಾಡಿಕೊಳ್ಳಲು ಯೋಗ್ಯನಾಗಿದ್ದೀಯ. ನನ್ನ ತರಬೇತಿ ಕಾರ್ಯ ಮುಗಿಯಿತು. ನೀನು ಕಾರಣವಿಲ್ಲದೆ ಸಾರಿ ಎಂದು ಹೇಳುವುದನ್ನು ಕಲಿತ ಮೇಲೆ ನೀನು ಮದುವೆಯನ್ನು ಮಾಡಿಕೊಳ್ಳಬಲ್ಲೆ!

***

ಶಿಕ್ಷಕ: ಆದರ್ಶ ವ್ಯಕ್ತಿಗಳು ಎಲ್ಲಿರುತ್ತಾರೆ?
ಗುಂಡ: ಜೈಲಿನಲ್ಲಿ ಇರುತ್ತಾರೆ ಸರ್.
ಶಿಕ್ಷಕ: ಅದು ಹೇಗೆ ಗುಂಡ?
ಗುಂಡ: ಕೈದಿಗಳು ನಿತ್ಯ ಬೆಳಿಗ್ಗೆ ಐದು ಗಂಟೆಗೆ ಏಳುತ್ತಾರೆ. ನಿಯಮಿತವಾಗಿ ವ್ಯಾಯಾಮ ಮಾಡುತ್ತಾರೆ. ತನ್ನ ಹಾಸಿಗೆಯನ್ನು ಖುದ್ದು ತಾವೇ ಹಾಸಿ, ಸುತ್ತಿ ಇಡುತ್ತಾರೆ. ಕೋಣೆ ಸ್ವಚ್ಛಗೊಳಿಸುತ್ತಾರೆ. ಮದ್ಯದಿಂದ ದೂರವಿರುತ್ತಾರೆ. ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರೆ. ಎಲ್ಲರೊಂದಿಗೆ ಮಾನವೀಯತೆಯಿಂದ ವರ್ತಿಸುತ್ತಾರೆ. ಅವರಿಗೆ ಹೊರಗೆ ಹೋಗುವ ಆಸಕ್ತಿ ಇರುವುದಿಲ್ಲ. ಅಡುಗೆ ಮಾಡುವಾಗ ಸಹಾಯ ಮಾಡುತ್ತಾರೆ. ಸರಳ ಜೀವನ, ಉನ್ನತ ವಿಚಾರ ಅವರ ಜೀವನದ ಧ್ಯೇಯವಾಗಿರುತ್ತದೆ. ನಿತ್ಯ ಪ್ರಾರ್ಥನೆಯನ್ನು ಮಾಡುತ್ತಾರೆ. ನಿತ್ಯ ಪುಸ್ತಕಗಳನ್ನು ಓದುತ್ತಾರೆ. ರಾತ್ರಿ ಸರಿಯಾಗಿ ಒಂಭತ್ತು ಗಂಟೆಗೆ ನಿದ್ರಿಸುತ್ತಾರೆ....... ಇಂಥ ಆದರ್ಶ ವ್ಯಕ್ತಿಗಳು ಜೈಲಿನಲ್ಲಿ ಮಾತ್ರ ಕಾಣ ಬರುತ್ತಾರೆ ಅಲ್ಲವೇ ಸರ್!

***

ಯುವತಿ: ನಾನು ನಿನ್ನ ಪ್ರೀತಿಯಿಂದ ದಿವಾಳಿಯಾದೆ, ಹಾಳಾದೆ, ಅಪಕೀರ್ತಿಗೆ ಒಳಗಾದೆ.
ಯುವಕ: ನೋಡು, ನಾನೇನು ನಿನ್ನ ಪ್ರೀತಿಯಿಂದ ಕಲೆಕ್ಟರ್ ಆದೆನಾ?...ನಾನೀಗ ತಲೆಕೆಟ್ಟು ಕಡ್ಲೆಕಾಯಿ ಮಾರ್ತಿದ್ದೇನೆ!

***

ಹೆಂಡತಿ: ನೀವು ಯಾವ ಕೆಲಸವನ್ನೂ ಸರಿಯಾಗಿ ಮಾಡಲ್ಲ.
ಗಂಡ: ನಾನೇನು ಈಗ ಅಂಥ ಕೆಲಸ ಮಾಡಿದೆ?
ಹೆಂಡತಿ: ನೀವು ಸಿಲಿಂಡರ್ ಹಾಕಿಸಿದ್ದರಲ್ಲ....
ಗಂಡ: ಹೌದು, ಹಾಕಿಸಿದ್ದೆ.
ಹೆಂಡತಿ: ಅದು ಹೇಗೆ ಹಾಕಿಸಿದ್ದೀರೋ, ಏನೋ...ನಿನ್ನೆಯಿಂದ ಎರಡು ಬಾರಿ ಹಾಲು ಕಾಯಿಸಿದೆ, ಎರಡು ಸಲವೂ ಹಾಲು ಒಡೆದು ಹೋಯ್ತು!!

***



ವೈದ್ಯ: ನಿಮಗೇನು ತೊಂದ್ರೆ?
ಖಿನ್ನತೆವುಳ್ಳ ಮಹಿಳೆ: ಡಾಕ್ಟರ್, ನನ್ನ ತಲೆಗೆ ಸಿಕ್ಕಾಪಟ್ಟೆ ಉಲ್ಟಾಪಲ್ಟಾ ವಿಚಾರಗಳು ಬರುತ್ತವೆ.
ವೈದ್ಯರು: ಎಂಥ ವಿಚಾರಗಳು?
ಮಹಿಳೆ: ಉದಾಹರಣೆಗೆ, ಈಗ ನಾನಿಲ್ಲಿಗೆ ಬಂದಿದ್ದೇನೆ. ನಿಮ್ಮ ಒಪಿಡಿಯಲ್ಲಿ ಒಬ್ಬ ಪೇಶೆಂಟ್ ಸಹ ಇರಲಿಲ್ಲ. ನಾನಾಗ, ನಿಮ್ಮ ಕ್ಲಿನಿಕ್‌ಗೆ ಒಬ್ಬರೂ ಬರಲ್ಲ, ಪರಿಸ್ಥಿತಿ ಈಗಿರುವಾಗ ಹೇಗೆ ಸಂಪಾದನೆಯಾಗುತ್ತೆ, ಇವರ ಮನೆಯ ಖರ್ಚುವೆಚ್ಚಗಳ ಕಥೆ ಏನು, ವೈದ್ಯಗಿರಿಯನ್ನು ಪಡೆಯಲು ಎಷ್ಟೊಂದೆಲ್ಲಾ ಹಣ ಖರ್ಚು ಮಾಡಿದ್ದಾರೆ, ಸುಂದರವಾದ ಕ್ಲಿನಿಕ್ ಕಟ್ಟಿಸಿದ್ದಾರೆ, ಈಗ ಸಾಲ ಹೇಗೆ ತೀರಿಸ್ತಾರೆ? ಒಂದು ವೇಳೆ ಖಿನ್ನತೆಗೆ ಒಳಗಾಗಿ ಕೊರಳಿಗೆ ಹಗ್ಗ ಕಟ್ಕೊಂಡು ಒಂದು ದಿನ ಸತ್ತರೆ? ಇಂಥ ವಿಚಾರಗಳು ಬರುತ್ತಿರುತ್ತವೆ.
(...ಮಹಿಳೆಯ ಮಾತು ಕೇಳಿ ಈಗ ವೈದ್ಯನೇ ಖಿನ್ನತೆಗೆ ಜಾರಿದ)

ಆಗತಾನೇ ಮದುವೆಯಾಗಿದ್ದ ಒಂದು ಜೋಡಿ ಉದ್ಯಾನವನದಲ್ಲಿ ವಾಯುವಿಹಾರ ಮಾಡುತ್ತಿತ್ತು. ಅಕಸ್ಮಾತ್ ನಾಯಿಯೊಂದು ಅವರೆಡೆಗೆ ಬೊಗಳುತ್ತಾ ಬಂತು. ತಕ್ಷಣ ಗಂಡ ಹೆಂಡತಿಯನ್ನು ಮಡಿಲಿನಲ್ಲಿ ಎತ್ತಿಕೊಂಡ. ನಾಯಿ ಕಡಿದರೆ ತನಗೇ ಕಡಿಯಲಿ ಎಂಬುದು ಅವನ ಉದ್ದೇಶವಾಗಿತ್ತು. ನಾಯಿ ಅವನ ಅತಿ ಸಮೀಪಕ್ಕೆ ಬಂದು ಸ್ವಲ್ಪ ಬೊಗಳಿ, ನಂತರ ತನ್ನ ಪಾಡಿಗೆ ತಾನು ಹೊರಟು ಹೋಯಿತು. ಗಂಡ ನೆಮ್ಮದಿಯಿಂದ ಉಸಿರಾಡುತ್ತಾ ಹೆಂಡತಿಯನ್ನು ಕೆಳಗಿಳಿಸಿ ಅವಳನ್ನು ಮತ್ತೂ ಪ್ರೀತಿಯಿಂದ ನೋಡಿದ. ಆದರೆ ಹೆಂಡತಿ ಅವನನ್ನು ತರಾಟೆಗೆ ತೆಗೆದುಕೊಂಡು ಹೀಗೆ ಕಿರುಚಿದಳು, 'ನಾಯಿಯನ್ನು ಓಡಿಸಲು ಕಲ್ಲು ಅಥವಾ ಕೋಲು ತೆಗೆದುಕೊಳ್ಳುವುದನ್ನು ಇಲ್ಲಿಯವರೆಗೆ ನಾನು ನೋಡಿದ್ದೇನೆ. ಆದರೆ ನೀನು ಹೆಂಡತಿಯನ್ನೇ ಎಸೆಯುವ ಮನುಷ್ಯನನ್ನು ನಾನು ನೋಡಿದ್ದು ಇದೇ ಮೊದಲು'!

(ಸಂಗ್ರಹ) ಡಿ.ಎನ್.ಶ್ರೀನಾಥ್, ಶಿವಮೊಗ್ಗ

